ಕೌಂಸಿಲ್ ಉ/ಬಿ. U/S
23-12-22

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 698

ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 23-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಖ್ಯಮಂತ್ರಿ "ರೈತ ಮಕ್ಕಳ ವಿದ್ಯಾನಿಧಿ" ಯೋಜನೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆಯೇ; ಹಾಗಿದ್ದಲ್ಲಿ, ಇದರ ರೂಪುರೇಷಗಳೇನು; | 2021-22ನೇ ಸಾಲಿನ ಆರ್ಥಿಕ ವರ್ಷದಿಂದ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮವನ್ನು ಸರ್ಕಾರದ ಆದೇಶದ ಸಂಖ್ಯೆ: AGRI-AML/141/2021, ದಿನಾಂಕ:07.08.2021, 10.12.2021 ಮತ್ತು 31.12.2021ರನ್ವಯ ಜಾರಿಗೊಳಿಸಲಾಗಿದೆ. ಸದರಿ ಕಾರ್ಯಕ್ರಮದಡಿ 8, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳು ಮತ್ತು ಎಸ್.ಎಸ್.ಎಲ್.ಸಿ / 10ನೇ ತರಗತಿಯನ್ನು ಪೂರೈಸಿರುವ ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ / ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳು ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಿರುತ್ತಾರೆ. ವಿದ್ಯಾರ್ಥಿ ವೇತನವನ್ನು ವಾರ್ಷಿಕವಾಗಿ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ (Direct Benefit Transfer – DBT) ಮೂಲಕ ವರ್ಗಾಯಿಸಲಾಗುತ್ತಿದೆ. |
| ಆ) | ಈ ಯೋಜನೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವಂತಹ ಮಾನದಂಡಗಳೇನು: | "ಮುಖ್ಯಮಂತ್ರಿ ರೈತ ವಿದ್ಯಾನಿಧಿ" ಯೋಜನೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವಂತಹ ಮಾನದಂಡಗಳು ಈ ಕೆಳಕಂಡಂತಿವೆ;<br>• ರೈತ ಕುಟುಂಬದ ಎಲ್ಲಾ ಮಕ್ಕಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ. ಸದರಿ ಉದ್ದೇಶಕ್ಕೆ ರೈತ ಕುಟುಂಬ ಎಂದರೆ ರಾಜ್ಯದ ಇ-ಆಡಳಿತ ಇಲಾಖೆಯು ನಿರ್ವಹಿಸುತ್ತಿರುವ "ಕುಟುಂಬ" ತಂತ್ರಾಂಶದ ದತ್ತಾಂಶದಲ್ಲಿ ದಾಖಲಾಗಿರುವ ಸದಸ್ಯರು.<br>• ವಿದ್ಯಾರ್ಥಿಯು ಇತರೆ ಯಾವುದೇ ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೂ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗುತ್ತಾರೆ. |

| | | |
|---|---|---|
| | | • 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿ ವೇತನವನ್ನು ವಿತರಿಸುವ ಉದ್ದೇಶಕ್ಕೆ ರಾಜ್ಯದ ವಿವಿಧ ಇಲಾಖೆಗಳು ನಿರ್ವಹಿಸುತ್ತಿರುವ ಶೈಕ್ಷಣಿಕ ಹಾಗೂ ಇತರೆ ದತ್ತಾಂಶದ ಆಧಾರದ ಮೇಲೆ ಅರ್ಹ ಫಲಾನುಭವಿಗಳನ್ನು ಗುರುತಿಸಿ (On entitlement basis) ವಿದ್ಯಾರ್ಥಿ ವೇತನವನ್ನು ವಿತರಿಸುವುದು ಹಾಗೂ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ, ಅಂತಹ ಪ್ರಕರಣಗಳನ್ನು ಸಹ ಪರಿಗಣಿಸಿ ಅರ್ಹರಿಗೆ ವಿದ್ಯಾರ್ಥಿ ವೇತನವನ್ನು ನೇರ ನಗದು ವರ್ಗಾವಣೆ (Direct Benefit Transfer) ಮೂಲಕ ವರ್ಗಾಯಿಸುವುದು.<br>• ಸರ್ಕಾರದ ಆದೇಶ ಸಂ- AGRI-AML/141/2021-22 ದಿ: 30.08.2022 ರನ್ವಯ 2022-23ನೇ ಶೈಕ್ಷಣಿಕ ಸಾಲಿನಿಂದ ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮವನ್ನು ಕೃಷಿ ಕಾರ್ಮಿಕರ ಮಕ್ಕಳಿಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ. |
| ಇ) | ಈ ಯೋಜನೆಯಿಂದ ರಾಜ್ಯದಲ್ಲಿ ಎಷ್ಟು ರೈತ ಮಕ್ಕಳಿಗೆ ಅನುಕೂಲವಾಗಲಿದೆ ಹಾಗೂ ಈ ಯೋಜನೆಗೆ ವಾರ್ಷಿಕವಾಗಿ ಸರ್ಕಾರವು ಎಷ್ಟು ಹಣವನ್ನು ವಿನಿಯೋಗಿಸಲಾಗುತ್ತಿದೆ? (ಜಿಲ್ಲಾವಾರು ವಿವರಗಳನ್ನು ನೀಡುವುದು) | ಸದರಿ ಕಾರ್ಯಕ್ರಮದಡಿ ದಿನಾಂಕ:12.12.2022 ರವರೆಗೆ 10,22,514 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೇರ ನಗದು ವರ್ಗಾವಣೆ (Direct Benefit Transfer) ಮೂಲಕ ವರ್ಗಾಯಿಸಲು ಮಂಜೂರಾತಿಯನ್ನು ನೀಡಿದೆ.<br><br>ಈ ಯೋಜನೆಗೆ 2022-23 ನೇ ಸಾಲಿಗೆ ರೂ. 1010.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ:** AGRI-AML/278 /2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

| ಅನುಬಂಧ | | | |
|---|---|---|---|
| ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮದ ಜಿಲ್ಲಾವಾರು ಪ್ರಗತಿ ವರದಿ (12.12.2022) | | | |
| ಕ್ರ.ಸಂ | ಜಿಲ್ಲೆ | ವಿದ್ಯಾರ್ಥಿಗಳ ಸಂಖ್ಯೆ | ಪಾವತಿಸಿರುವ ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬಾಗಲಕೋಟೆ | 48729 | 1899.59 |
| 2 | ಬಳ್ಳಾರಿ | 45731 | 1886.185 |
| 3 | ಬೆಳಗಾವಿ | 99844 | 3842.085 |
| 4 | ಬೆಂಗಳೂರು ಗ್ರಾ | 9876 | 434.78 |
| 5 | ಬೆಂಗಳೂರು ನಗರ | 59887 | 4655.41 |
| 6 | ಬೀದರ್ | 28564 | 1229.79 |
| 7 | ಚಾಮರಾಜನಗರ | 11144 | 415.315 |
| 8 | ಚಿಕ್ಕಬಳ್ಳಾಪುರ | 16893 | 679.78 |
| 9 | ಚಿಕ್ಕಮಗಳೂರು | 13608 | 525.75 |
| 10 | ಚಿತ್ರದುರ್ಗ | 27488 | 1033.205 |
| 11 | ದಕ್ಷಿಣ ಕನ್ನಡ | 36847 | 1802.69 |
| 12 | ದಾವಣಗೆರೆ | 30491 | 1446.65 |
| 13 | ಧಾರವಾಡ | 37934 | 1839.57 |
| 14 | ಗದಗ | 25204 | 1008.585 |
| 15 | ಹಾಸನ | 34973 | 1544.8 |
| 16 | ಹಾವೇರಿ | 29520 | 1110.405 |
| 17 | ಕಲಬುರ್ಗಿ | 51548 | 2319.31 |
| 18 | ಕೊಡಗು | 5562 | 241.855 |
| 19 | ಕೋಲಾರ | 17780 | 674.38 |
| 20 | ಕೊಪ್ಪಳ | 31844 | 1168.065 |
| 21 | ಮಂಡ್ಯ | 34519 | 1595.365 |
| 22 | ಮೈಸೂರು | 53119 | 2824.145 |
| 23 | ರಾಯಚೂರು | 42847 | 1717.67 |
| 24 | ರಾಮನಗರ | 12526 | 498.28 |
| 25 | ಶಿವಮೊಗ್ಗ | 31080 | 1436.01 |
| 26 | ತುಮಕೂರು | 45931 | 1994.625 |
| 27 | ಉಡುಪಿ | 26995 | 1070.86 |
| 28 | ಉತ್ತರ ಕನ್ನಡ | 25579 | 946.815 |
| 29 | ವಿಜಯಪುರ | 49033 | 1897.44 |
| 30 | ಯಾದಗಿರಿ | 24457 | 900.85 |
| 31 | | 1970 | 39.4 |
| ಒಟ್ಟು | | **1011523** | **44679.66** |

**ಷರಾ:ಉಳಿದ ವಿದ್ಯಾರ್ಥಿಗಳ ಜಿಲ್ಲಾವಾರು ವಿಂಗಡಣೆ ಪೋರ್ಟಲ್ ನಲ್ಲಿ ಪ್ರಗತಿಯಲ್ಲಿರುತ್ತದೆ.**

ಕೃಷಿ ನಿರ್ದೇಶಕರು